ಓ ಎಸ್ ನಂಃ403/2014

ಡಿ. ಡಬ್ಲ್ಯೂ ಃ 4

ದಿಃ 19.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಎಲ್ ವಕೀಲರಿಂದ

ಗಂಗಹನುಮಕ್ಕ ಇವರು ದ್ಯಾವಲಿಂಗಯ್ಯ ಇವರ ದೊಡ್ಡ ಮಗಳಿರುತ್ತಾಳೆ. ದ್ಯಾವಲಿಂಗಯ್ಯ ಅವರು ಸತ್ತ 1-2 ವರ್ಷದಲ್ಲಿ ಅವರ ಮದುವೆ ಮಾಡಿರುತ್ತಾರೆ. ಅವರು 1948 ಅಥವಾ 1949 ರಲ್ಲಿ ತೀರಿಕೊಂಡಿರುತ್ತಾರೆ. ಅವರ ಮರಣಪ್ರಮಾಣಪತ್ರ ಇರುವುದಿಲ್ಲ. ಸಣ್ಣ ಹನುಮಕ್ಕ ಇವರ ಮದುವೆಯಾಗಿ ಈಗ 80 ವರ್ಷಗಳಾಗಿವೆ. ಅವರು ಮದುವೆಯಾದ ಬಗ್ಗೆ ನನ್ನ ಬಳಿ ಯಾವುದೆ ದಾಖಲೆಗಳು ಇರುವುದಿಲ್ಲ, ಆದರೆ ಮನೆಯ ಸದಸ್ಯರು ಅದನ್ನು ಹೇಳುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ವಾದಿಯು ಭಾಗ ಕೇಳಿ ದಾವೆ ಮಾಡಿದ್ದಾರೆ. ಅವರ ವಾದಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಈ ಕೇಸ್ ನ ನೋಟೀಸ್ ಗಳು ದಾವೆ ಹಾಕಿದಾಗ ನನಗೆ ಬಂದಿದ್ದವು.

2011 ರಲ್ಲಿಯೇ ನಮ್ಮ ಪರವಾಗಿ ಲಾಯರ್ ಇಟ್ಟುಕೊಂಡಿದ್ದೇವು ಎಂದರೆ ಸರಿ. ನಾನು ಮತ್ತು ನಮ್ಮ ದೊಡ್ಡಪ್ಪ ಒಟ್ಟಿಗೆ ಲಾಯರ್ ನೇಮಿಸಿದ್ದೇವು ಎಂದರೆ ಸರಿ. ನಮ್ಮಲಾಯರ್ ಗೆ ಪ್ರತಿವಾದಪತ್ರ ಸಲ್ಲಿಸಲು ದಾಖಲೆಗಳನ್ನು ಮತ್ತು ಮಾಹಿತಿಯನ್ನು ನಮ್ಮ ತಂದೆ ಆಂಜನಪ್ಪ ಮತ್ತು ನಮ್ಮ ದೊಡ್ಡಪ್ಪ ಗಾಳಿಹನುಮಯ್ಯ ಕೊಟ್ಟಿದ್ದರು. ಕಳೆದ 2-3 ವರ್ಷಗಳಿಂದ ಕೇಸ್ ನ ಜವಾಬ್ದಾರಿಯನ್ನು ನಾನು ತೆಗೆದುಕೊಂಡಿದ್ದೇನೆ. ಪ್ರಾರಂಭದಲ್ಲಿ ನಮ್ಮ ದೊಡ್ಡಪ್ಪ ಗಾಳಿಹನುಮಯ್ಯ ನಮ್ಮೆಲ್ಲರ ಪರವಾಗಿ ಕೇಸ್ ನಡೆಸುತ್ತಿದ್ದಾರೆ ಎಂದು ತಿಳಿದುಕೊಂಡಿದ್ದೇವು. ನಂತರ ಅವರು ಆ ರೀತಿ ಮಾಡಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಂತರ ಅವರ ಗಾಳಿಹನುಮಯ್ಯ ಮತ್ತು ಆಂಜನಪ್ಪ ಇಬ್ಬರನ್ನು ಮಾತ್ರ ನ್ಯಾಯಾಲಯಕ್ಕೆ ಬರುವಂತೆ ಮಾಡಿದ್ದರು. ಗಾಳಿಹನುಮಯ್ಯ ಮತ್ತು ಆಂಜನಪ್ಪ ಜಂಟಿ ಪ್ರತಿವಾದಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ.

ಗಾಳಿಹನುಮಯ್ಯ ಇವರ ಸಾಕ್ಷಿ ವಿಚಾರಣೆಯ ಸಮಯದಲ್ಲಿ ನಾನು ನ್ಯಾಯಾಲಯದಲ್ಲಿ ಹಾಜರಿದ್ದೆನು ಎಂದರೆ ಸರಿಯಲ್ಲ. ಗಾಳಿಹನುಮಯ್ಯ ಇವರಿಗೆ ವಾದಿ ಪರವಾಗಿ ಏನೇನು ಪಾಟೀ ಸವಾಲು ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನನ್ನ ತಂದೆ ಆಂಜನಪ್ಪ ಇವರು ನಾನು ಈಗಾಗಲೇ ಪ್ರತಿವಾದಪತ್ರ ಸಲ್ಲಿಸಿ ಸಾಕ್ಷಿ ಸಹ ಹೇಳಿದ್ದೇವೆ ಎಂದು ನನಗೆ ಹೇಳಿಲ್ಲ. ಈರಯ್ಯ ನ ತಮ್ಮಂದಿರು ಸ್ವಾತಂತ್ರ್ಯ ಬರುವ ಮೊದಲೆ ಬೆಂಗಳೂರಿಗೆ ವಲಸೆ ಹೋಗಿದ್ದರು. ಆ ಬಗ್ಗೆ ನನ್ನ ಬಳಿ ಯಾವುದೆ ದಾಖಲೆಗಳು ಇಲ್ಲ. ತೋಟಿ ಕೆಲಸ ವಂಶಪಾರಂಪರ್ಯವಾಗಿ ನಡೆದುಕೊಂಡು ಬರುವ

ಕಸುಬು ಎಂದರೆ ಸರಿ. ಅದಕ್ಕಾಗಿ ದ್ಯಾವಲಿಂಗಯ್ಯ ಇವರಿಗೆ ಸರ್ಕಾರ ಜಮೀನು ಬಿಟ್ಟುಕೊಟ್ಟಿತ್ತು ಎಂದರೆ ಸರಿಯಲ್ಲ. ಸ.ನಂ. 9, 10, 41, 22/1 ಮತ್ತು ಸ.ನಂ. 25 ಇವುಗಳನ್ನು ದ್ಯಾವಲಿಂಗಯ್ಯ ಇವರು ವ್ಯವಸಾಯ ಮಾಡುತ್ತಿದ್ದರು. ಆ ಸ್ವತ್ತುಗಳು ಮೊದಲು ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿದ್ದವು. ದ್ಯಾವಲಿಂಗಯ್ಯ ಇವರು ಎಲ್ಲ ಸ್ವತ್ತುಗಳನ್ನು 1944-45 ನೇ ಸಾಲಿನಲ್ಲಿ ಮಾರಾಟ ಮಾಡಿದ್ದಾರೆ. ಆ ಬಗ್ಗೆ ಕ್ರಯಪತ್ರ ಹಾಜರುಪಡಿಸಿಲ್ಲ.

ಸ.ನಂ. 25 ರಲ್ಲಿ 6 ಎಕರೆ 35 ಗುಂಟೆ ದೊಡ್ಡಮಾರನಹಳ್ಳಿ ಗ್ರಾಮದಲ್ಲಿ ಇರುವ ಅರಸಪ್ಪ ಇವರಿಗೆ ಮಾರಾಟ ಮಾಡಿದ್ದಾರೆ. ಉಳಿದ ಜಮೀನುಗಳನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅರಸಪ್ಪ ಇವರ ಹೆಸರಿನಲ್ಲಿ ಇರುವ ಪಹಣಿಗಳನ್ನು ನಾನು ಹಾಜರುಪಡಿಸಿದ್ದೇನೆ. ಸ.ನಂ. 9, 10, 41, 22/1 ಮತ್ತು ಸ.ನಂ. 25 ಇವುಗಳು ದ್ಯಾವಲಿಂಗಯ್ಯ ಇವರಿಗೆ ಸೇರಿದ್ದವು ಎಂದು ತೋರಿಸಲು ನಾನು ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಸ.ನಂಬರ್ ಗಳ ಎಂ ಆರ್ ಗಳನ್ನು ಕೊಟ್ಟಿಲ್ಲ. ನನ್ನ ಪ್ರಮಾಣಪತ್ರದಲ್ಲಿ 1962 ರಲ್ಲಿ ನಿಂಗಯ್ಯ ಮತ್ತು ಗಂಗಯ್ಯ ವಲಸೆ ಹೋಗಿದ್ದಾರೆ ಎಂದು ಬರೆಯಿಸಿರುವುದು ಸರಿ ಇರುತ್ತದೆ. ದ್ಯಾವಲಿಂಗಯ್ಯ ಇವರ ಮಕ್ಕಳು 1982-83 ರಲ್ಲಿ ಆಸ್ತಿ ವಿಭಾಗ ಮಾಡಿಕೊಂಡಿದ್ದಾರೆ. ಆ ಬಗ್ಗೆ ಯಾವುದೆ ದಾಖಲೆ ಕೊಟ್ಟಿಲ್ಲ. ಸ.ನಂ. 22, ಸ.ನಂ. 50, ಸ.ನಂ. 44/3, ಸ.ನಂ. 26 ಮತ್ತು ಸ.ನಂ. 23 ಇವುಗಗಳನ್ನು ದ್ಯಾವಲಿಂಗಯ್ಯ ಇವರ ಮಕ್ಕಳು ಭಾಗ ಮಾಡಿಕೊಂಡಿದ್ದಾರೆ. ನಿಂಗಯ್ಯ ಮತ್ತು ಗಂಗಯ್ಯ ನಿಗೆ ಮೇಲೆ ಹೇಳಿದ ಸ.ನಂಬರ್ ಗಳಲ್ಲಿ ಭಾಗ ಕೊಟ್ಟಿಲ್ಲ. ಭಾಗ ಆಗಿದೆ ಎಂದು ಊರಿನಲ್ಲಿ ಮಾತನಾಡುತ್ತಿದ್ದರು. ನಾನು ದಾಖಲೆಗಳನ್ನು ನೋಡಿಲ್ಲ.

ದ್ಯಾವಲಿಂಗಯ್ಯ ಇವರ ಮಕ್ಕಳುಗಳು ಜೊತೆಯಲ್ಲಿ ಇದ್ದಾಗ ನಿ ಡಿ 24 ಇದನ್ನು ದೊಡ್ಡ ಮಗ ಈರಯ್ಯ ಇವರ ಹೆಸರಿನಲ್ಲಿ ಒಟ್ಟು ಕುಟುಂಬದ ಪರವಾಗಿ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಅದು ನಿ ಡಿ 24 ರಲ್ಲಿ ಇರುವ ಸ್ವತ್ತಿನ ಸ.ನಂಬರ್ 44/3 ಇರುತ್ತದೆ. ನನ್ನ ಪ್ರಮಾಣಪತ್ರದ ಪ್ಯಾರಾ 4 ರಲ್ಲಿ ದ್ಯಾವಲಿಂಗಯ್ಯ ತೀರಿಕೊಂಡ ನಂತರ ಈರಯ್ಯನೇ ಮನೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದನು ಎಂದು ನಾನು ಹೇಳಿಲ್ಲ. ಸ.ನಂ. 57 ಇದು ಈರಯ್ಯನ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ಆ ಬಗ್ಗೆ ಯಾವುದೆ ದಾಖಲೆಗಳನ್ನು ನಾನು ಕೊಟ್ಟಿಲ್ಲ.

ಸ.ನಂ. 50 ಇದು ಈರಯ್ಯ ಇವರ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಲು ನಾನು ಯಾವುದೆ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸ.ನಂ. 57 ನ್ನು ಈರಯ್ಯ ಇವರು ಸರ್ಕಾರಿ ಗೋಮಾಳ ಹರಾಜು ಮಾಡಿದಾಗ ತೆಗೆದುಕೊಂಡಿದ್ದಾರೆ. ಈ ವಿಷಯವನ್ನು ನನ್ನ

ಪ್ರಮಾಣಪತ್ರದಲ್ಲಿ ಮತ್ತು ತಕರಾರಿನಲ್ಲಿ ಹೇಳಿಲ್ಲ. ಸ.ನಂ. 50 ನ್ನು ದೊಡ್ಡಮಾರನಹಳ್ಳಿ ಗ್ರಾಮದ ಮುದ್ದರಸಯ್ಯ ಇವರಿಂದ ಈರಯ್ಯ ಕ್ರಯಕ್ಕೆ ತೆಗೆದುಕೊಂಡಿದ್ದಾರೆ. ಆ ಬಗ್ಗೆ ಕ್ರಯಪತ್ರ ಮತ್ತು ಎಂ ಆರ್ ಗಳನ್ನು ನಾನು ಕೊಟ್ಟಿಲ್ಲ. ಹಳೆಯ ಸ.ನಂ. 22, ಹೊಸ ಸ.ನಂ. 62 ರಲ್ಲಿ 1975 ರಿಂದ ಅನಧಿಕೃತವಾಗಿ ಉಳುಮೆ ಮಾಡುತ್ತಿದ್ದನು. ಸಾಗುವಳಿ ಚೀಟಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದ್ಯಾವಲಿಂಗಯ್ಯ ಮತ್ತು ಅವರ ತಂದೆಯ ಕಾಲದಿಂದ ಹಳೆಯ ಸ.ನಂ. 22, ಹೊಸ ಸ.ನಂ. 62 ಇದನ್ನು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಗುವಳಿ ಚೀಟಿಯಲ್ಲಿ ಈರಯ್ಯ ನ ಹೆಸರು ಮಾತ್ರ ಇದೆ.

ದ್ಯಾವಲಿಂಗಯ್ಯ ಸತ್ತ ನಂತರ ಅವರ ಮಕ್ಕಳಾದ ಈರಯ್ಯ, ನಿಂಗಯ್ಯ ಮತ್ತು ಗಂಗಯ್ಯ ಇವರೆಲ್ಲರು ಜಂಟಿ ಸ್ವಾಧೀನದಲ್ಲಿದ್ದುಕೊಂಡು ಒಟ್ಟು ಕುಟುಂಬದ ಪರವಾಗಿ ಈರಯ್ಯ ನವರ ಹಸೆರಿನಲ್ಲಿ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಈ ಎಲ್ಲ ವಿಷಯವನ್ನು ಮರೆಮಾಚಿ ನನ್ನ ದೊಡ್ಡಪ್ಪ ಈ ಹಿಂದೆ ನಮ್ಮ ಪರವಾಗಿ ಸಾಕ್ಷಿ ಹೇಳಿ ಒಪ್ಪಿಕೊಂಡಿದ್ದನ್ನು ಮರೆ ಮಾಚುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 6.05.1975 ರಲ್ಲಿ ಸ.ನಂ. 26 ರಲ್ಲಿ 1 ಎಕರೆ ಕ್ರಯಕ್ಕೆ ತೆಗೆದುಕೊಂಡಿದ್ದು ಒಟ್ಟು ಕುಟುಂಬದ ಪರವಾಗಿ ಈರಯ್ಯನ ಹೆಸರಿನಲ್ಲಿ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲ ಸ್ವತ್ತುಗಳು ಮಳೆಯ ಆಶ್ರಿತ ಸ್ವತ್ತುಗಳೆಂದರೆ ಸರಿ. ಆ ಸ್ವತ್ತುಗಳಲ್ಲಿ ಬೆಳೆದ ಬೆಳೆಗಳು ಕುಟುಂಬ ನಿರ್ವಹಣೆಗೆ ಸಾಕಾಗುತ್ತಿದ್ದವು ಎಂದರೆ ಸರಿಯಲ್ಲ.

1975 ರ ಸಂದರ್ಭದಲ್ಲಿ ಪ್ರತಿ ಎಕರೆಗೆ 3 ರಿಂದ 4 ಪಲ್ಲ ರಾಗಿಯನ್ನು ಮಾತ್ರ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ಈರಯ್ಯ ಇವರು ಸ,ನಂ. 23 ರಲ್ಲಿ ಒಟ್ಟು ಕುಟುಂಬದ ಪರವಾಗಿ ಜಮೀನು ಮಂಜೂರು ಮಾಡಲು ಅರ್ಜಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಅದು ಒಟ್ಟು ಕುಟುಂಬದ ಪರವಾಗಿ ಮಂಜೂರಾಗಿತ್ತು ಮತ್ತು ದ್ಯಾವಲಿಂಗಯ್ಯ ನ 3 ಜನ ಮಕ್ಕಳು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಎ ಸಿ ರಾಮನಗರ ಇವರು ನಿಂಗಯ್ಯ ಹೆಸರಿನಲ್ಲಿ ಅವರ ಜಾಗ ಪ್ರತ್ಯೇಕವಾಗಿರುವುದರಿಂದ ಹಿಂಬರಹ ಕೊಟ್ಟಿದ್ದಾರೆ. ಆ ಹಿಂಬರಹವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಸ.ನಂ. 57 ರಲ್ಲಿ ಪಡ ಇದ್ದುದ್ದನ್ನು ನಾವು ಅಗ್ರಿಮೆಂಟ್ ಮಾಡಿಕೊಂಡ ವ್ಯಕ್ತಿಗಳಿಗೆ ರಿಸ್ಟೋರ್ ಮಾಡಲು ಕೇಳಿದ್ದೇವು ಎಂದರೆ ಸರಿಯಲ್ಲ. ವಾದಿಗಳು ಬಿಟ್ಟು 2007 ರಲ್ಲಿ ನಾವು ಮತ್ತು ಕ್ರಯದಾರರು ಪಡ ರೆಸ್ಟೋರ್ ಮಾಡಲು ಪ್ರಯತ್ನಿಸಿದೇವು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪ ದೊಡ್ಡಮಾರನಹಳ್ಳಿ ಪಟೇಲರ ಮನೆಯಲ್ಲಿ ಜೀತಕ್ಕೆ ಇದ್ದರು. ಈ ವಿಷಯವನ್ನು ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪ ಇವರ ಪ್ರತಿವಾದಪತ್ರದಲ್ಲಿ ಹೇಳಿದ್ದಾರೆ. ಶಿವರುದ್ರಪ್ಪ, ಚನ್ನಪ್ಪ, ವೀರಭದ್ರಪ್ಪ , ಶಿವರುದ್ರಯ್ಯ ಬೀರೇಶ್ ಮತ್ತು ಕುಮಾರ್ ಇವರುಗಳು ವಾದಿಯ ಹಕ್ಕು ತಪ್ಪಿಸುವ ಉದ್ದೇಶದಿಂದ ಎ ಸಿ ಮತ್ತು ಡಿ ಸಿ ಇವರಿಗೆ ಪಡ ರೆಸ್ಟೋರ್ ಮಾಡಲು ಹಣ ಪಾವತಿಸಿ ನಮ್ಮ ಹೆಸರಿನಲ್ಲಿ ಖಾತೆ ಮಾಡಿಸಿದ್ದಾರೆ ಎಂದರೆ

ಸರಿಯಲ್ಲ. ನಿಂಗಯ್ಯ ಮತ್ತು ಗಂಗಯ್ಯ ಇವರುಗಳು ಯಾವುದೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿಲ್ಲ ಮತ್ತು ವಿಭಾಗಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಈ ಹಿಂದೆ ಹೇಳಿದ ಸಾಕ್ಷಿಯ ಲೋಪದೋಷಗಳನ್ನು ಸರಿಪಡಿಸುವ ಉದ್ದೇಶದಿಂದ ನಾನು ಹೊಸದಾಗಿ ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ವಿಭಾಗ ಆಗಿಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**